**ರಾಷ್ಟ್ರೀಯ ಶಿಕ್ಷಣ ನೀತಿ-2020 ಅನ್ನು ಯಶಸ್ವಿಯಾಗಿ 3 ವರ್ಷಗಳನ್ನು ಪೂರ್ಣಗೊಳಿಸಿದ್ದರ ಅಂಗವಾಗಿ ಆನ್‌ಲೈನ್ ಮಾದರಿಯಲ್ಲಿ ಭಾರತೀಯ ಭಾಷೆಗಳು ಮತ್ತು ಸಾಹಿತ್ಯದಲ್ಲಿ ಪ್ರಶ್ನಾಂಶ ಬರೆವಣಿಗೆಯ ರಾಷ್ಟ್ರೀಯ ಮ್ಯಾರಥಾನ್ ಅನ್ನು ಆಯೋಜಿಸಲಾಗಿದೆ.**

## ಕನ್ನಡ ಭಾಷೆಗಾಗಿ ಪ್ರಶ್ನಾಂಶ ಬರೆವಣಿಗೆಯ ಆನ್‌ಲೈನ್ ಮ್ಯಾರಥಾನ್

- **ಏನು:** ಭಾರತೀಯ ಭಾಷೆಗಳು ಮತ್ತು ಸಾಹಿತ್ಯದಲ್ಲಿ ಹಾಗೂ ಕನ್ನಡ ಭಾಷೆ/ಭಾಷಾಶಾಸ್ತ್ರದ ಬೋಧನೆಯಲ್ಲಿ ತೊಡಗಿರುವ ಭಾರತದ ಸಹಾಯಕ ಪ್ರಾಧ್ಯಾಪಕರು/ಉಪನ್ಯಾಸಕರು ಮತ್ತು ಸಂಶೋಧನಾರ್ಥಿಗಳಿಗಾಗಿ ಆನ್‌ಲೈನ್ ನಲ್ಲಿ ಪ್ರಶ್ನಾಂಶ ಬರೆವಣಿಗೆಯ ಕುರಿತು 15 ದಿನಗಳ ಮ್ಯಾರಥಾನ್ ಕಾರ್ಯಕ್ರಮ.
- **ಯಾವಾಗ:** 28-08-2023 ರಿಂದ 11-09-2023 ರವರೆಗೆ (ದಿನಾಂಕವನ್ನು ವಿಸ್ತರಿಸಲಾಗಿದೆ)
- **ಮಾದರಿ:** ಆನ್‌ಲೈನ್ – ಗೂಗಲ್ ಮೀಟ್ ಮತ್ತು ರಾಪಸೇ-ಭಾರತ ಸಂಸ್ಥೆಯಿಂದ ಪ್ರಶ್ನಾಂಶ ದಾಖಲಿಸುವ ಕ್ರಮ.
- **ಸ್ಥಳ:** ರಾಷ್ಟ್ರೀಯ ಪರೀಕ್ಷಣ ಸೇವೆ- ಭಾರತ, ಭಾರತೀಯ ಭಾಷಾ ಸಂಸ್ಥಾನ, ಮೈಸೂರು.

- **ಅರ್ಹತೆ:**
  - ಭಾರತದಾದ್ಯಂತದ ವಿಶ್ವವಿದ್ಯಾಲಯಗಳಲ್ಲಿ ಕನ್ನಡ ಭಾಷೆಯ ಬೋಧನೆ ಮತ್ತು ಕಲಿಕೆಯಲ್ಲಿ ತೊಡಗಿರುವ ಸಹಾಯಕ ಪ್ರಾಧ್ಯಾಪಕರು/ಉಪನ್ಯಾಸಕರು ಮತ್ತು ಸಂಶೋಧನಾರ್ಥಿಗಳು ಅರ್ಹರಾಗಿದ್ದಾರೆ (ಭಾಷೆ/ಸಾಹಿತ್ಯ/ ಭಾಷಾಶಾಸ್ತ್ರ ವಿಷಯಗಳ ಸರ್ಕಾರಿ ಅಥವಾ ಸರ್ಕಾರಿ ಅನುದಾನಿತ/ಸ್ವಾಯತ್ತ ಸಂಸ್ಥೆಗಳು).
  - ಸಾಮಾನ್ಯ ಇಂಗ್ಲಿಷ್ ಸಂವಹನ ಕೌಶಲ್ಯದ ಅಗತ್ಯವಿದೆ.
  - ಭಾಷಾಶಾಸ್ತ್ರ/ಭಾಷಾ ವಿಜ್ಞಾನಗಳಲ್ಲಿ ಉನ್ನತ ಪದವಿ ಪಡೆದಿರುವವರಿಗೆ ಮತ್ತು ಈಗಾಗಲೇ ರಾಪಸೇ-ಭಾರತ ಸಂಸ್ಥೆಯಿಂದ 5-ದಿನದ ಕನ್ನಡ ಭಾಷೆಯ ಪರೀಕ್ಷಣ ಮತ್ತು ಮೌಲ್ಯನಿರ್ಧಾರಣೆಯ ಕಾರ್ಯಾಗಾರದಲ್ಲಿ ಮೂಲ ತರಬೇತಿ ಪಡೆದಿರುವವರಿಗೆ ಆದ್ಯತೆ ನೀಡಲಾಗುವುದು.

- **ಅಗತ್ಯವಿರುವ ವ್ಯವಸ್ಥೆಗಳು:**
  - ಕನಿಷ್ಠ ಸೌಲಭ್ಯಗಳುಳ್ಳ ಹಾಗೂ ಉತ್ತಮ ಸ್ಥಿತಿಯಲ್ಲಿರುವ ಡೆಸ್ಕ್ ಟಾಪ್/ಲ್ಯಾಪ್‌ಟಾಪ್ (4GB RAM OS ವಿಂಡೋಸ್ XP, 7 ಮತ್ತು ಕೋರ್ 2 ಡಿಯೋ ಪ್ರೊಸೆಸರ್)
  - ಸ್ಥಿರ ಅಂತರ್ಜಾಲದ ಸಂಪರ್ಕ
  - ಗೂಗಲ್ ಕ್ರೋಮ್, ಮೊಜಿಲ್ಲಾ ಫೈರ್‌ಫಾಕ್ಸ್, ಇಂಟರ್ನೆಟ್ ಎಕ್ಸ್‌ಪ್ಲೋರರ್ ಮುಂತಾದ ಬ್ರೌಸರ್‌ಗಳೊಂದಿಗೆ ಯುನಿಕೋಡ್ ಸಕ್ರಿಯಗೊಳಿಸಿದ ಡೆಸ್ಕ್‌ಟಾಪ್/ಲ್ಯಾಪ್‌ಟಾಪ್ ನಂತಹ ಬ್ರೌಸರ್‌ಗಳ ಇತ್ತೀಚಿನ ಆವೃತ್ತಿಯ ಬಳಕೆಯನ್ನು ಹೆಚ್ಚು ಶಿಫಾರಸು ಮಾಡಲಾಗಿದೆ.

• **ಧ್ಯೇಯೋದ್ದೇಶಗಳು:**

- ರಾಷ್ಟ್ರೀಯ ಶಿಕ್ಷಣ ನೀತಿ-2020 ರ ಯಶಸ್ವಿ ಅನುಷ್ಠಾನದ ಮೂರನೇ ವರ್ಷವನ್ನು ಆಚರಿಸಲು.
- ಮಧ್ಯಸ್ಥಗಾರರಲ್ಲಿ ಪರೀಕ್ಷಣೆ ಮತ್ತು ಮೌಲ್ಯನಿರ್ಧಾರಣೆಯ ವೈಜ್ಞಾನಿಕ ವಿಧಾನದ ಬಗ್ಗೆ ರಾಷ್ಟ್ರವ್ಯಾಪಿ ಒಮ್ಮತ ಮತ್ತು ಜಾಗೃತಿಯನ್ನು ಮೂಡಿಸಲು.
- ಭಾಷೆ, ಸಾಹಿತ್ಯ ಮತ್ತು ಭಾಷಾಶಾಸ್ತ್ರ ಕ್ಷೇತ್ರಗಳ ಶಿಕ್ಷಕರು/ಸಂಶೋಧನಾರ್ಥಿಗಳು/ವೃತ್ತಿಪರರ ವೃತ್ತಿಪರ ಕೌಶಲ್ಯಗಳನ್ನು ಅಭಿವೃದ್ಧಿಪಡಿಸಲು.

- **ಪರಿಹಾರ:**

  - ಎಲ್ಲಾ ಯಶಸ್ವಿ ಶಿಬಿರಾರ್ಥಿಗಳು ಸಾಂಕೇತಿಕ ಗೌರವಧನವಾಗಿ 4,500.00 ರೂ.ಗಳನ್ನು (ನಾಲ್ಕು ಸಾವಿರದ ಐದು ನೂರು ಮಾತ್ರ) ಪಡೆಯಲು ಅರ್ಹರಾಗಿರುತ್ತಾರೆ. ಗೌರವಧನಕ್ಕೆ ಅರ್ಹರಾಗಲು, ಶಿಬಿರಾರ್ಥಿಗಳು ಆರಂಭದಿಂದ  ಮ್ಯಾರಥಾನ್‌ನ ಅಂತ್ಯದವರೆಗೆ ಪ್ರತಿದಿನ ಮಾನ್ಯವಾದ ಕನಿಷ್ಠ ಸಂಖ್ಯೆಯ ಪ್ರಶ್ನಾಂಶಗಳನ್ನು ದಾಖಲಿಸಬೇಕು.
  - ಎಲ್ಲಾ ಯಶಸ್ವಿ ಶಿಬಿರಾರ್ಥಿಗಳು ಭಾಗವಹಿಸಿದ್ದರ ಅಂಗವಾಗಿ ಪ್ರಮಾಣಪತ್ರವನ್ನು ಸ್ವೀಕರಿಸುತ್ತಾರೆ.
  - ವಿಜೇತರು (ಪ್ರತಿ ಭಾಷೆಗೆ ಒಬ್ಬರು), ವಿತರಿಸಲಾದ ಶೀರ್ಷಿಕೆಯಡಿಯಲ್ಲಿ ಪರಾಮಿತಿಗಳು ಮತ್ತು ಮಾನದಂಡಗಳನ್ನು ಒಳಗೊಂಡ ಮಾನ್ಯವಾದ ಪ್ರಶ್ನೆ ಹಾಗೂ ಅದ್ವಿತೀಯ ಪ್ರಶ್ನಾಂಶಗಳನ್ನು ದಾಖಲಿಸಿರುವುದನ್ನು ಆಧರಿಸಿರುತ್ತದೆ.  ಇವರಿಗೆ ಸಾಮಾನ್ಯ ಪರಿಹಾರದ ಜೊತೆಗೆ, ಈ ಕೆಳಗಿನವುಗಳೊಂದಿಗೆ ಗೌರವಿಸಲಾಗುತ್ತದೆ.
  - ಪ್ರಶಸ್ತಿ ಪ್ರಮಾಣಪತ್ರ
  - ಒಂದು ಟ್ರೋಫಿ
  - ರಾಪಸೇ-ಭಾರತ ಸಂಸ್ಥೆಯೊಂದಿಗೆ 2 ತಿಂಗಳವರೆಗೆ ಸಂಪೂರ್ಣವಾಗಿ ಪಾವತಿಸಿದ ವಸತಿ, ಸ್ಥಿರ ಗೌರವಧನದೊಂದಿಗೆ ಪ್ರಯಾಣಭತ್ಯೆಯೊಂದಿಗೆ (ತಿಂಗಳಿಗೆ ಅಂದಾಜು 20-25ಸಾವಿರ ರೂಪಾಯಿ) ವಿಸ್ತರಿಸಲಾಗದ ಕೆಲಸದ ಅವಕಾಶ.

- **ನಿಬಂಧನೆಗಳು ಮತ್ತು ಷರತ್ತುಗಳು :**

  - ಗೌರವಧನದ ಸ್ವೀಕೃತಿಗೆ ಅರ್ಹರಾಗಲು, ಆಯ್ಕೆಮಾಡಲಾದ ಶಿಬಿರಾರ್ಥಿಗಳು ಸರಿಯಾಗಿ ಭರ್ತಿ ಮಾಡಿದ ಮತ್ತು ಸಹಿ ಮಾಡಿದ ಗೌರವಧನದ ರಶೀದಿಗಳು, ಪ್ಯಾನ್ ಕಾರ್ಡ್ ಮತ್ತು ಆಧಾರ್ ಕಾರ್ಡ್‌ಗಳ ನಕಲುಪ್ರತಿಯನ್ನು ಆದಷ್ಟು ಬೇಗ ನೋಂದಾಯಿತ ಅಂಚೆ ಮೂಲಕ ಕಳುಹಿಸುವುದು ಕಡ್ಡಾಯವಾಗಿದೆ. ಅಂಚೆವಿಳಾಸ ಮತ್ತು ಗೌರವಧನ ರಶೀದಿ ಮತ್ತು ಬ್ಯಾಂಕಿನ ಸಾಫ್ಟ್ ಪ್ರತಿಗಳನ್ನು ಆಯ್ಕೆಪಟ್ಟಿಯೊಂದಿಗೆ 25.08.2023 ರಂದು ಅಪ್‌ಲೋಡ್ ಮಾಡಲಾಗುತ್ತದೆ. ಗೌರವಧನವು ಆದಾಯ ತೆರಿಗೆ ಕಡಿತಕ್ಕೆ ಒಳಪಟ್ಟಿರುತ್ತದೆ.

- ಎಲ್ಲೆಲ್ಲಿ ಅನ್ವಯಿಸುತ್ತದೆಯೋ ಅಲ್ಲಿ ಶಿಬಿರಾರ್ಥಿಗಳು ಪರೀಕ್ಷಣ ಮತ್ತು ಮೌಲ್ಯನಿರ್ಧಾರಣೆಯ ಮೂಲ ತರಬೇತಿ ಕಾರ್ಯಕ್ರಮಕ್ಕೆ ಹಾಜರಾಗಿದ್ದಕ್ಕೆ ಪುರಾವೆಯಾಗಿ ರಾಪಸೇ-ಭಾರತ ನೀಡಿದ ಪ್ರಮಾಣಪತ್ರದ ಸ್ಕ್ಯಾನ್ ಮಾಡಿದ ಪ್ರತಿಯನ್ನು ಹಾಜರುಪಡಿಸಬೇಕು.
- ಕನಿಷ್ಠ 20 ಮಾನ್ಯ ಪ್ರಶ್ನಾಂಶಗಳನ್ನು ತಪ್ಪದೆ ಪ್ರತಿದಿನ ದಾಖಲಿಸಬೇಕು. ಶಿಬಿರಾರ್ಥಿಗಳು ಒಂದು ದಿನದಲ್ಲಿ 20 ಕ್ಕಿಂತ ಕಡಿಮೆ ಪ್ರಶ್ನಾಂಶಗಳನ್ನು ನಮೂದಿಸಿದರೆ, ಅವಳು/ಅವನು ಮ್ಯಾರಥಾನ್‌ನಿಂದ ಅನರ್ಹಗೊಳ್ಳುತ್ತಾರೆ. (ದಿನವನ್ನು ಬೆಳಿಗ್ಗೆ 12:00 ರಿಂದ ರಾತ್ರಿ 11:59 ರವರೆಗೆ ಲೆಕ್ಕಹಾಕಲಾಗುತ್ತದೆ). ಮತ್ತು ಅವರು ಯಾವುದೇ ಗೌರವಧನ ಅಥವಾ ಬಹುಮಾನಕ್ಕೆ ಅರ್ಹರಾಗಿರುವುದಿಲ್ಲ.
- ದಾಖಲಿಸಿದ ಪ್ರಶ್ನಾಂಶಗಳನ್ನು ಯಾವುದೇ ಪ್ರಶ್ನಾವಳಿ, ಮಾರ್ಗದರ್ಶಿ ಪುಸ್ತಕ ಇತ್ಯಾದಿಗಳಿಂದ ನಕಲು ಮಾಡಬಾರದು.
- ಭಾಗವಹಿಸುವವರು ಯಾವುದೇ ಸಮಯದಲ್ಲಿ ಪ್ರಶ್ನಾಂಶವನ್ನು ದಾಖಲಿಸಬಹುದಾದರೂ, ತಾಂತ್ರಿಕ/ಶೈಕ್ಷಣಿಕ ನೆರವು ಪಡೆಯಲು ಕಚೇರಿ ಸಮಯದಲ್ಲಿ ಅಂದರೆ ಬೆಳಿಗ್ಗೆ 09:30 ರಿಂದ ಸಂಜೆ 5:30 ರವರೆಗೆ ಮತ್ತು ಕೆಲಸದ ದಿನಗಳಲ್ಲಿ (ಸೋಮವಾರದಿಂದ ಶುಕ್ರವಾರದವರೆಗೆ) ಮಾತ್ರ ಲಭ್ಯವಿರುತ್ತದೆ.
- ಮ್ಯಾರಥಾನ್‌ನ ಮೊದಲ/ಎರಡನೆಯ ದಿನದಂದು ವಿವರವಾದ ಮಾರ್ಗಸೂಚಿಗಳೊಂದಿಗೆ ಅಗತ್ಯವಿರುವ ತರಬೇತಿಯನ್ನು ನೀಡಲಾಗುತ್ತದೆ.
- ಭಾರತೀಯ ಭಾಷಾ ಸಂಸ್ಥಾನ ಮತ್ತು ಅದರ ಕೇಂದ್ರಗಳ ಸಿಬ್ಬಂದಿಗಳು/ಅಧಿಕಾರಿಗಳು ಸಹ ಇದಕ್ಕಾಗಿ ಅರ್ಜಿ ಸಲ್ಲಿಸಬಹುದು; ಆದಾಗ್ಯೂ, ಅವರು ಕೆಲಸಕ್ಕಾಗಿ ಯಾವುದೇ ಗೌರವಧನವನ್ನು ಪಡೆಯಲು ಅರ್ಹರಾಗಿರುವುದಿಲ್ಲ. ಇತರ ನಿಬಂಧನೆಗಳು ಮತ್ತು ಷರತ್ತುಗಳು ಹಾಗೆಯೇ ಇರುತ್ತವೆ.
- ಭಾರತೀಯ ಭಾಷಾ ಸಂಸ್ಥಾನದ ವಿವಿಧ ಘಟಕಗಳು/ಕಾರ್ಯಯೋಜನೆಗಳು/ಕೇಂದ್ರಗಳು/ಯೋಜನೆಗಳಲ್ಲಿ (ರಾಪಸೇ-ಭಾರತ ಹೊರತುಪಡಿಸಿ) ಕರಾರಿನ ಕ್ರಮದಲ್ಲಿ ಕೆಲಸ ಮಾಡುತ್ತಿರುವ ಸಂಪನ್ಮೂಲ ವ್ಯಕ್ತಿಗಳು/ಸಿಬ್ಬಂದಿಗಳು ಸಹ ಸರಿಯಾದ ಮಾರ್ಗದ ಮೂಲಕ ಅರ್ಜಿ ಸಲ್ಲಿಸಬಹುದು; ಆದಾಗ್ಯೂ, ಅವರು ಕೆಲಸಕ್ಕಾಗಿ ಯಾವುದೇ ಗೌರವಧನವನ್ನು ಪಡೆಯಲು ಅರ್ಹರಾಗಿರುವುದಿಲ್ಲ. ಇತರ ನಿಯಮಗಳು ಮತ್ತು ಷರತ್ತುಗಳು ಹಾಗೆಯೇ ಇರುತ್ತವೆ.

- **ಸೂಚನೆ :**
  - ಮ್ಯಾರಥಾನ್ ಅನ್ನು ಗೂಗಲ್ ಮೀಟ್ ಮೂಲಕ ನಡೆಸುವುದರಿಂದ ಎಲ್ಲಾ ಭಾಗವಹಿಸುವವರು ಮಾನ್ಯವಾದ ಇಮೇಲ್ ಖಾತೆಯನ್ನು ಹೊಂದಿರಬೇಕು (ಜಿಮೇಲ್ ಖಾತೆಗೆ ಆದ್ಯತೆ ನೀಡಲಾಗುತ್ತದೆ).
  - ಈ ಕಾರ್ಯಕ್ರಮದಲ್ಲಿ ಭಾಗವಹಿಸಲು ಕನ್ನಡ ಬೆರಳಚ್ಚಿನಲ್ಲಿ ಪ್ರಾವೀಣ್ಯತೆ ಹೊಂದಿರುವುದು ಅತ್ಯಗತ್ಯವಾದ ಮಾನದಂಡವಾಗಿದೆ.
  - ಆಯ್ಕೆಯಾದ ಅಭ್ಯರ್ಥಿಗಳ ಪಟ್ಟಿಯನ್ನು 25.08.2023 ರಂದು ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುತ್ತದೆ.
  - ಭಾಗವಹಿಸುವವರೆಲ್ಲರೂ ಮ್ಯಾರಥಾನ್‌ನಲ್ಲಿ ಭಾಗವಹಿಸುವ ಸಮಯದಲ್ಲಿ ಸಕ್ಷಮ ಪ್ರಾಧಿಕಾರದಿಂದ ನಿಗದಿಪಡಿಸಿದ ನೀತಿ ಸಂಹಿತೆ / ಮಾರ್ಗಸೂಚಿಗಳಿಗೆ ಬದ್ಧರಾಗಿರಬೇಕು. ಭಾರತೀಯ ಭಾಷಾ ಸಂಸ್ಥಾನ, ಶಿಕ್ಷಣ

ಸಚಿವಾಲಯ, ನವದೆಹಲಿ ಮತ್ತು ಭಾರತ ಸರ್ಕಾರದ ಅಡಿಯಲ್ಲಿ ಕಾರ್ಯನಿರ್ವಹಿಸುವ ಅಧೀನ ಕಚೇರಿಯಾಗಿದೆ. ಕಾರ್ಯಕ್ರಮದ ಸಮಯದಲ್ಲಿ ಯಾವುದೇ ಉಲ್ಲಂಘನೆ, ದುರ್ನಡತೆಯನ್ನು ತೋರಿದಲ್ಲಿ ಸಂಸ್ಥೆ / ಭಾರತ ಸರ್ಕಾರದ ನಿಯಮಗಳ ಪ್ರಕಾರ ಗಂಭೀರ ಶಿಸ್ತಿನ ಕ್ರಮವನ್ನು ತೆಗೆದುಕೊಳ್ಳುತ್ತದೆ.

- ಯಾವುದೇ ಕಾರಣವನ್ನು ನೀಡದೆಯೇ ಯಾವುದೇ ಅರ್ಜಿಯನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಸಂಸ್ಥೆ ಕಾಯ್ದಿರಿಸಿಕೊಂಡಿದೆ.
- ಯಾವುದೇ ಕಾರಣಗಳನ್ನು ನೀಡದೆ ಈ ಕಾರ್ಯಕ್ರಮವನ್ನು ಪೂರ್ವ ನಿಗದಿ ಮಾಡುವ, ಮುಂದೂಡುವ ಅಥವಾ ರದ್ದುಗೊಳಿಸುವ ಹಕ್ಕನ್ನು ಸಂಸ್ಥೆಯು ಕಾಯ್ದಿರಿಸಿಕೊಂಡಿದೆ.

- **ಅರ್ಜಿ ಸಲ್ಲಿಸುವುದು ಹೇಗೆ?**
  - ಆನ್‌ಲೈನ್ ತರಬೇತಿ ಮತ್ತು ಕಾರ್ಯಾಗಾರಕ್ಕೆ ಹಾಜರಾಗಲು ಇಚ್ಛಿಸುವವರು ಈ ಪುಟದ ಕೆಳಭಾಗದಲ್ಲಿರುವ "ಆನ್‌ಲೈನ್ ನೋಂದಣಿ" ಲಿಂಕ್ ಅನ್ನು ಕ್ಲಿಕ್ ಮಾಡುವ ಮೂಲಕ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು. ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವಾಗ ದಯವಿಟ್ಟು ಎಲ್ಲಾ ಹಂತಗಳನ್ನು ಎಚ್ಚರಿಕೆಯಿಂದ ಅನುಸರಿಸಿ. ಅಂತಿಮ ಹಂತದಲ್ಲಿ ನಿಮ್ಮ ನೋಂದಣಿ ಅರ್ಜಿಯ PDF ಫೈಲ್ ಅನ್ನು ರಚಿಸಲಾಗುತ್ತದೆ ಮತ್ತು ಅದನ್ನು ನಿಮ್ಮ ನೋಂದಾಯಿತ ಇಮೇಲ್ ಖಾತೆಗೆ ಕಳುಹಿಸಲಾಗುತ್ತದೆ. ಆನ್‌ಲೈನ್ ನೋಂದಣಿ ಲಿಂಕ್ ಅನ್ನು 25.08.2023 ರಂದು ಅಂತ್ಯಗೊಳಿಸಲಾಗುತ್ತದೆ (ಬೆಳಿಗ್ಗೆ 11.30 ಕ್ಕೆ ಮುನ್ನ).